ಬಾಳೆ, ಮಾವಿನಮರ ಮತ್ತು ಚೌಡಿಕಲ್ಲು ಆ ಗುಂಡಿಯೊಳಗೆ ಬಿದ್ದವು. ಮಳೆಗಾಲದಲ್ಲಿ ನೀರಿನ ಸದ್ದು ಜಲಪಾತದಂತೆ ಕೇಳಿಬರುತ್ತಿತ್ತು. ಹಗಲು ಹೊತ್ತು ನೀರು ಹೊಳೆಯ ಹಾಗೆ ಹರಿಯುತ್ತಿತ್ತು. ಈ ನಡುವೆ ಚಂದ್ರು ತನ್ನ ತಂದೆ ತಾಯಿಗಳ ಜೊತೆಯಲ್ಲಿ ಎರಡು ಮೂರು ಊರು ಸುತ್ತಾಡಿ, ಮಿಡ್ಲ್‌ಸ್ಕೂಲ್ ಓದುವುದಕ್ಕೆ ಮತ್ತೆ ಅಜ್ಜನ ಮನೆಗೆ ಬಂದಿದ್ದ.

ಅಜ್ಜಿಯ ಜೊತೆ ಹಿತ್ತಲಿಗೆ ಹೋದಾಗ ಎಮ್ಮೆಕರು ಕಾಫಿಗಿಡದ ಹತ್ತಿರ ಮೇಯುತ್ತಿತ್ತು. ಅದರ ಕೊರಳಪಟ್ಟಿಯನ್ನು ಹಿಡಿದು ಅಜ್ಜಿ ಕೊಟ್ಟಿಗೆಗೆ ಎಳೆದುಕೊಂಡು ಬಂದಳು. ಕೊಟ್ಟಿಗೆ ಹತ್ತಿರವಿದ್ದ ತೊಂಡೆ ಬಳ್ಳಿಯನ್ನು ನೋಡಿ 'ಅಜ್ಜಿ ತುಂಬಾ ಕಾಯಿಬಿಟ್ಟಿದೆ. ಕೊಯ್ತೀನಿ. ಎಣ್ಣೆಗಾಯಿ ಮಾಡ್ತೀಯ?' ಅಂತ ಚಂದ್ರು ಕೇಳಿದ. 'ಆಗ್ಲಿ ಕಣೋ' ಎಂದು ಅಜ್ಜಿ ಹೇಳಿದಳು. ಚಂದ್ರು ತೊಂಡೆಕಾಯಿಗಳನ್ನು ಕೊಯ್ದು ತಂದು ಅಡಿಗೆಮನೆಯಲ್ಲಿಟ್ಟು ಪಡಸಾಲೆಗೆ ಬರುವ ಹೊತ್ತಿಗೆ, ಪಂಚಾಂಗ ಹಿಡಿದು ಕೂತಿದ್ದ ಬಿಳಿಅಜ್ಜ 'ಆ ಕರಿಯ ಹೋದ್ನೇನೊ?' ಎಂದು ಕೇಳಿದ. ಅಲ್ಲಿಂದ ಕರಿಅಜ್ಜ ಊರುಗೋಲು ಹಾಕಿ ಬೀದಿಗೆ ಹೋದದ್ದು ಬಿಳಿಅಜ್ಜನಿಗೂ ಕಂಡಿತ್ತು. 'ಹೂಂ ಅಜ್ಜ' ಎಂದ ಚಂದ್ರು ಎಲೆ ಅಡಿಕೆ ಹಾಕಿಕೊಳ್ಳುತ್ತ ಪಡಸಾಲೆಯಲ್ಲಿ ಕೂತಿದ್ದ ಅಜ್ಜಿಕಡೆಗೆ ತಿರುಗಿ ಬಿಳಿಅಜ್ಜ 'ಏನೇ ಆ ಕರಿಯ ತಿಂದುಕೊಂಡು ತಿರುಗ್ತಿರ್‍ತಾನೊ ಅಥವಾ ಮನೆಗೇನಾದ್ರೂ ಸಾಮಾನು ತಂದು ಹಾಕ್ತಾನೊ?' ಎಂದು ಕೇಳಿದಾಗ, ಅಜ್ಜಿ 'ನಂಗೇನು ಗೊತ್ತು' ಎಂದಳು. 'ನಂಗೇನು ಗೊತ್ತಂತೆ! ನಂಗೇನು ಗೊತ್ತು!' ಎಂದು ಬಿಳಿಅಜ್ಜ ಅಣಕಿಸಿದ. 'ಆ ಸೂಳೇ ಮಗನ್ನ ಇಲ್ಲಿ ಸೇರಿಸಿದ್ದೇ ನೀನು.'

ಅಜ್ಜಿ ಮಾತಾಡಲಿಲ್ಲ. ಚಂದ್ರು ಅಮರಕೋಶವನ್ನು ಉರು ಹೊಡೆಯುತ್ತಿದ್ದ. 'ಚಂದ್ರೂ' ಎಂದು ಬಿಳಿಅಜ್ಜ ಕರೆದಾಗ 'ಏನಜ್ಜ?' ಎಂದ ಚಂದ್ರು ಆಗ ಪಂಚೆ ಉಟ್ಟುಕೊಂಡು ಇನ್ನೊಂದು ವಸ್ತ್ರವನ್ನು ಹೊದ್ದುಕೊಂಡಿದ್ದ ಬಿಳಿಅಜ್ಜ 'ಆ ಕರಿಯ ಬಂದರೆ, ಮನೇಗೇನಾದ್ರೂ ತಂದು ಹಾಕ್ತಾನೊ, ಇಲ್ಲ ಮನೆಬಿಟ್ಟು ಹೋಗ್ತಾನೊ ಕೇಳು. ಪರದೇಶಿ ಅಂತ ಸ್ಥಳ ಕೊಟ್ಟರೆ ದರ್ಬಾರು ನಡೆಸ್ತಾನೆ!' ಎಂದು ಹೇಳಿದ. 'ಆಗ್ಲಜ್ಜ' ಎಂದು ಹೇಳಿದ ಚಂದ್ರ ಎಲೆಕೋಸಿನ ಸಸಿಗಳನ್ನು ಕಿತ್ತು ನೆಡಲಿಕೆ ಹಿತ್ತಲಿಗೆ ಹೋದ.

ಚಂದ್ರು ಸಸಿಗಳನ್ನು ಕಿತ್ತು ನೆಡುತ್ತಿದ್ದಾಗ ಬಿಳಿಅಜ್ಜನೇ ಕರಿಅಜ್ಜನಿಗೆ ಹೇಳಬಾರದೇಕೆ ಎಂದು ಯೋಚಿಸಿದ. ಅವರಿಬ್ಬರೂ ಮಾತಾಡಿದ್ದನ್ನು ಚಂದ್ರು ಎಂದೂ ನೋಡಿರಲಿಲ್ಲ. ಬಿಳಿಅಜ್ಜ ತೆಳ್ಳಗೆ ಬೆಳ್ಳಗಿದ್ದ. ಕಡ್ಡಿ ಕಡ್ಡಿಯಾಗಿದ್ದ. ಎಲುಬು ಚರ್ಮ ಮಾತ್ರ ಎದ್ದು ಕಾಣುತ್ತಿತ್ತು ಕರಿಅಜ್ಜ ದಪ್ಪದಪ್ಪವಾಗಿದ್ದ ಹಿತ್ತಲಿನಲ್ಲಿ ನೀರುಹರಿದು ಗುಂಡಿಬಿದ್ದಾಗ ಕರಿಅಜ್ಜ ಅದಕ್ಕೆ ಕಲ್ಲುಕಟ್ಟಿಸಿ ಮನೆಯೂ ಬೀಳದ ಹಾಗೆ ನೋಡಿಕೊಂಡಿದ್ದ. ಕರಿಅಜ್ಜನ ಎತ್ತಿನಗಾಡಿಯಲ್ಲಿ ಮನೆಗೆ ಸೌದೆ ಬರುತ್ತಿತ್ತು. ಅದೂ ಇದೂ ಯೋಚಿಸುತ್ತ ಎಲೆಕೋಸಿನ ಸಸಿಗಳನ್ನು ಕಿತ್ತು ನೆಟ್ಟು ಅವಕ್ಕಿಟ್ಟು ನೀರು ಹಾಕಿ ಬರುವ ಹೊತ್ತಿಗೆ ಬಿಳಿಅಜ್ಜ ದೇವಸ್ಥಾನಕ್ಕೆ ಹೊರಟಿದ್ದ.

ಯಥಾಪ್ರಕಾರ ಹನ್ನೆರಡು ಗಂಟೆಗೆ ಮನೆಗೆ ಬಂದು ಸ್ನಾನಮಾಡಿ ಚಂದ್ರುವಿನ ಜೊತೆಯಲ್ಲಿ ಊಟಮಾಡಿ ಮಲಗಿಕೊಳ್ಳುವ ಹೊತ್ತಿಗೆ ಬಿಳಿಅಜ್ಜ ದೇವಸ್ಥಾನದಿಂದ ಬಂದ. ಬಿಳಿಅಜ್ಜ ಬರುವಾಗ ಅವನ ಕೈಯಲ್ಲಿ ವಾಲೆಗರಿ ಛತ್ರಿ ಇತ್ತು 'ಮಳೆ ಬಂತ ಅಜ್ಜ?' ಎಂದು ಚಂದ್ರು ಕೇಳಿದ. 'ಒಂದು ನಾಕು ಹನಿ ಬಿತ್ತು' ಎಂದು ಬಿಳಿಅಜ್ಜ ಊಟ ಮಾಡುವುದಕ್ಕೆ ಅಡಿಗೆಮನೆಗೆ ಹೋದ. ಚಂದ್ರುವಿಗೆ ಮಧ್ಯಾಹ್ನ ನಿದ್ದೆ ಬರುತ್ತಿರಲಿಲ್ಲ. ಅಜ್ಜಿ ಜೊತೆ ಹಾಲವಾಣದ ಬೀಜಗಳನ್ನಿಟ್ಟುಕೊಂಡು ಚನ್ನೆಮಣೆ ಆಡಿದ. ಚಂದ್ರು ಅದೃಷ್ಟ ಚನ್ನಾಗಿತ್ತು ಅಂತ ಕಾಣುತ್ತೆ